ಅ) ಈ ಆಣೆಕಟ್ಟು ನಿರ್ಮಾಣ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೨.೩೯ ಲಕ್ಷ ರೂಪಾಯಿಂಗಳು.

ಆ) ಕೆಲಸವು ಪ್ರಗತಿಯಲ್ಲಿದ್ದು, ಏಪ್ರಿಲ್ ೧೯೮೭ರ ಕೊನೆಯ ವೇಳೆಗೆ ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ.

ಬೆಳಗಾಂ ಜಿಲ್ಲೆಯ ಖಾನಪುರ ತಾಲ್ಲೂಕಿನ "ಮಾದಾವಿ" ಹೊಳೆಯನ್ನು ಮಲಪ್ರಭ ಹೊಳೆಯಲ್ಲಿ ಬಿಡುವ ಬಗ್ಗೆ

೧೪೮೨. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾದಾವಿ ಹೊಳೆ ಕರ್ನಾಟಕದ ಹಾಗೂ ಗೋವೆಯ ಸರಹದ್ದಿನಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವುದು ನಿಜವೆ;

ಆ) ಮಾದಾವಿ ಹೊಳೆಯನ್ನು ಅಡ್ಡಗಟ್ಟಿ ಮಲಪ್ರಭಾ ಹೊಳೆಗೆ ಸೇರಿಸಲು ಹಿಂದೆ ಯಾರಿಂದ ವರದಿಯನ್ನು ತಯಾರು ಮಾಡಲಾಗಿದ್ದಿತು.

ಇ) ಮಾದಾವಿ ಯೋಜನೆಯಿಂದ ಸಂಗ್ರಹಣೆಯಾಗುವ ನೀರಿನ ಪ್ರಮಾಣವೆಷ್ಟು;

ಈ) ಮೇಲಿನ ಯೋಜನೆಯನ್ನು ಈ ವರ್ಷದ ಆಥವಾ ಬರುವ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ತಿ ಮಾಡುವುದಕ್ಕಾಗಿ ಸರ್ಕಾರದವರ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ೧೯೮೪ರಲ್ಲಿ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರು ಕಳುಹಿಸಿರುತ್ತಾರೆ

ಇ) ಇನ್ನೂ ನಿಖರವಾಗಿಲ್ಲ.

ಈ) ಮಹಾದಾಯಿ ನದಿಯ ನೀರನ್ನು ಜಲ ವಿದ್ಯುತ್ ಯೋಜನೆಗೆ ಪಶ್ಚಿಮಾಭಿಮುಖವಾಗಿ ಹರಿಸಲು ೧೯೭೮ರಲ್ಲಿ ಸರ್ಕಾರಿ ಆಜ್ಞೆ ಹೊರಡಿಸಲಾಗಿದೆ. ಆದಾಗ್ಯೂ ನೀರಾವರಿ ಪ್ರಮುಖತೆಯಿಂದ ಮಹದಾಯಿಯಂ ೧೦ ದಶ ಲಕ್ಷ ಘನ ಅಡಿ ನೀರನ್ನಾದರೂ ಪೂರ್ವಾಭಿಮುಖವಾಗಿ ಮಲಪ್ರಭಾ ನದಿಗೆ ತಿರುಗಿಸುವ ಪ್ರಸ್ತಾವೆಯನ್ನು ಯೋಜಿಸಿ ೧೯೭೮ರಲ್ಲಿ ಹೊರಡಿಸಿರುವ ಸರ್ಕಾರಿ ಆಜ್ಞೆಗೆ ಸೂಕ್ತ ಬದಲಾವಣೆ ಮಾಡಿಸುವ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಆಜ್ಞೆ ಹೊರಟ ನಂತರ ಅನ್ವೇಷಣಾ ಕಾರ್ಯ ಪ್ರಾರಂಭವಾಗುವುದು.

ರಾಜ್ಯದಲ್ಲಿ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಾಲೆ ಕಟ್ಟಡಗಳಿಗೆ ಬಾಡಿಗೆ ನೀಡಿರುವ ಬಗ್ಗೆ

೧೬೫೭. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಿಗಾಗಿ ಖಾಸಗಿಯವರಿಂದ ಪಡೆದಿರುವ ಕಟ್ಟಡಗಳ ಸಂಖ್ಯೆ ಎಷ್ಟು ?

೨) ಬಾಡಿಗೆಗೆ ತೆಗೆದುಕೊಂಡಿರುವ ಕಟ್ಟಡಗಳಿಗೆ ಕೊಡಬೇಕಾಗಿರುವ ಒಟ್ಟಾರೆ ಬಾಡಿಗೆಯು ಮೊತ್ತವೆಷ್ಟು ?

೩) ಪ್ರತಿ ತಿಂಗಳಂ ಶಾಲೆಗಾಗಿ ತೆಗೆದುಕೊಂಡಿರಂವ ಕಟ್ಟಡಗಳ ಬಾಡಿಗೆಯನ್ನು ನೇರವಾಗಿ ಪಂಟ್ಟಿಸಂವಂತೆ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ?

೪) ರಾಜ್ಯದಲ್ಲಿ ಶಾಲಾ ಹಾಗೂ ಕಾಲೇಜುಗಳ ಕಾರ್ಯಾಚರಣೆಗಾಗಿ ಹೊಸ ಕಟ್ಟಡ ಕಟ್ಟುವುದರಲ್ಲಿ ಸರ್ಕಾರದವರು ಹಮ್ಮಿಕೊಂಡಿರಂವ ಕಾರ್ಯಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

೧) ೨,೨೪೮

೨) ವರ್ಷಕ್ಕೆ ರೂ. ೩೦ ಲಕ್ಷ

೩) ಕಟ್ಟಡದ ಮಾಲೀಕರಿಗೆ ನೇರವಾಗಿ ಇಲಾಖೆಯ ಮೂಲಕ ಬಾಡಿಗೆ ಪಾವತಿ ಮಾಡಲಾಗುತ್ತದೆ.

೪) ಗ್ರಾಮಾಂತರ ಪ್ರದೇಶಗಳಲ್ಲಿ ಎನ್.ಆರ್.ಇ.ಪಿ. ಯೋಜನೆಯಲ್ಲಿ ಹೊಸ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ. ನಗರ ಪ್ರದೇಶಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಹೊಸ ಕಟ್ಟಡಗಳನ್ನು ಕಟ್ಟಿಸಲು ಪರಿಶೀಲಿಸಲಾಗುತ್ತದೆ.

ಮೈಸೂರು ವಿಶ್ವವಿದ್ಯಾನಿಲಯ ಹಂಗಾಮಿ ಉಪಾಧ್ಯಾಯರ ಹಾಗೂ ನೌಕರರ ಬಗ್ಗೆ

೧೬೮೭. **ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).**—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಸುಮಾರು ಹತ್ತಾರು ವರ್ಷಗಳಿಂದ ಹಂಗಾಮಿ ನೌಕರಿಯಲ್ಲಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ? ಹಾಗೂ ಉಪಾಧ್ಯಾಯರಲ್ಲದವರ ಸಂಖ್ಯೆ ಎಷ್ಟು ?

ಆ) ಸರ್ಕಾರದ ನೀತಿಗಳಿಗನುಸಾರವಾಗಿ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಹಂಗಾಮಿ ಉಪಾಧ್ಯಾಯರು ಹಾಗೂ ನೌಕರರನ್ನು ಖಾಯಂ ಮಾಡಿರಂತ್ತಾರೆಯೇ ?

ಇ) ಅದೇ ನೀತಿಯನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನುಸರಿಸದಿರಲು ಕಾರಣವೇನು?

ಈ) ಈ ದಿಸೆಯಲ್ಲಿ ನೊಂದವರಿಗೆ ಆದಷ್ಟುಬೇಗನೆ ನ್ಯಾಯ ದೊರಕಿಸಿ ಕೊಡಲು ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

	ಬೋಧಕರು	ಬೋಧಕೇತರರು
೧ನೇ ವರ್ಗ (ಸ್ಪಷ್ಟವಾದ ಹುದ್ದೆಗಳಲ್ಲಿ ಮುಂದುವರಿಯುತ್ತಿದ್ದಾರೆ).	೧೯	೮೧
೨ನೇ ವರ್ಗ (೬ ತಿಂಗಳ ಅವಧಿಗೆ ಸೃಷ್ಟಿಸಿರುವ ಹುದ್ದೆಗಳಲ್ಲಿ ಮುಂದುವರಿಯುತ್ತಿದ್ದಾರೆ)	೪೪	

ಉ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ೧೦ ಜನ ಹಂಗಾಮಿ ಉಪಾಧ್ಯಾಯರುಗಳನ್ನು ದಿನಾಂಕ ೨೫-೭-೮೬ರಂದು ಖಾಯಂಗೊಳಿಸಿದ್ದಾರೆ ಅದನ್ನು ಸರ್ಕಾರ ಸಕ್ರಮಗೊಳಿಸಬೇಕಾಗಿರುತ್ತೆ ಬೇರೆ ಯಾವ ವಿಶ್ವವಿದ್ಯಾನಿಲಯಗಳಲ್ಲೂ ಹಂಗಾಮಿ ಬೋಧಕ ಮತ್ತು ಬೋಧಕೇತರರನ್ನು ಖಾಯಂಗೊಳಿಸಿಲ್ಲ.

ಊ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಋ) ಮೇಲೆ ಹೇಳಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.